# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 137(245)
2) ಸದಸ್ಯರ ಹೆಸರು : ಶ್ರೀ ಎನ್.ಎಸ್. ಬೋಸ್‌ರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 11.07.2018
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ). | ಮಾನ್ವಿ ಪಟ್ಟಣದಲ್ಲಿ "ಟ್ರೀ" ಪಾರ್ಕ್ ನಿರ್ಮಾಣ ಯಾವ ಹಂತದಲ್ಲಿದೆ; ಇದನ್ನು ಯಾವಾಗ ಪೂರ್ಣ ಗೊಳಿಸಲಾಗುವುದು; | ಮಾನ್ವಿ ಪಟ್ಟಣದ ಟ್ರೀ ಪಾರ್ಕನ್ನು 2017–18ನೇ ಸಾಲಿನಲ್ಲಿ ನಿರ್ಮಾಣ ಕಾರ್ಯಕೈಗೊಂಡು, 6 ಹೆಕ್ಟೇರ್ ಪ್ರದೇಶದಲ್ಲಿ 2400 ದೊಡ್ಡಗಾತ್ರದ ಸಸಿಗಳನ್ನು ನೆಡಲಾಗಿದೆ. ಟ್ರೀ ಪಾರ್ಕ್ ಸುತ್ತಲೂ ಬಾರ್ಬ್ಡ್‌ವೈರ್ ಮತ್ತು ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಲಾಗಿದೆ.<br>2020–21ರವರೆಗೆ ಹಂತಹಂತವಾಗಿ ವಿವಿಧ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು. |
| ಆ). | ರಾಯಚೂರು ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶ ಎಷ್ಟು; ಅದನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು; | ರಾಯಚೂರು ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ವಿವರ ಈ ಕೆಳಕಾಣಿಸಿದಂತಿದೆ: (ಕೆಳಗಿನ ಕೋಷ್ಟಕ)<br>• ಸದರಿ ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ವಿವಿಧ ಯೋಜನೆಗಳಡಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಮಾಡಲಾಗುತ್ತಿದೆ.<br>• ಶಾಲಾಕಾಲೇಜು ವಿದ್ಯಾರ್ಥಿಗಳು, ಸರ್ಕಾರೇತರ ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ ಸೂಕ್ತ ಸ್ಥಳಗಳಲ್ಲಿ ಬೀಜದುಂಡೆಗಳನ್ನು ಬಿತ್ತನೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಈ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಲ್ಲಿ ಹಸಿರು ಕವಚ ಹೆಚ್ಚಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. |
| ಇ). | ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಹೆಚ್ಚಿಸಲು 2018–19ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳೇನು? | 2018–19ನೇ ಸಾಲಿನಲ್ಲಿ 228.4 ಹೆ. ಪ್ರದೇಶದಲ್ಲಿ ನೆಡುತೋಪು ನಿರ್ಮಿಸುವ ಗುರಿ ಹೊಂದಲಾಗಿದೆ. ಅಲ್ಲದೆ, ಶಾಲಾ ಆವರಣ/ರೈತರ ಜಮೀನು/ಸಂಘಸಂಸ್ಥೆಗಳಿಗೆ 1.95 ಲಕ್ಷ ಸಸಿಗಳನ್ನು ವಿತರಿಸುವ ಹಾಗೂ 50,000 ಬೀಜದುಂಡೆಗಳನ್ನು ಬಿತ್ತುವ ಗುರಿ ಹೊಂದಲಾಗಿದೆ. |

| | | |
|---|---|---|
| 1 | ಕಾಯ್ದಿಟ್ಟ ಅರಣ್ಯ | 20117.91 ಹೆ. |
| 2 | ರಕ್ಷಿತ ಅರಣ್ಯ | 4121.93 ಹೆ. |
| 3 | ಅವರ್ಗೀಕೃತ ಅರಣ್ಯ | 10216.86 ಹೆ |
| | ಒಟ್ಟು | **34,456.69 ಹೆ.** |

ಸಂಖ್ಯೆ: ಅಪಜೀ 43 ಎಫ್‌ಟಿಎಸ್ 2018

(ಆರ್.ಶಂಕರ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು